**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂ:27/2022**

**ಪಿ ಡಬ್ಲ್ಯೂ:1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು: ದಿ: 18/09/2024.**

**ಮುಂ. ಮುಖ್ಯ ವಿಚಾರಣೆ: ಶ್ರೀ ಯ್ಯೂ ಎಮ್ ಪಿ ವಕೀಲರಿಂದ ವಾದಿ ಪರ ವಕೀಲರು:**

2. ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಈ ಹಿಂದೆ ಲಿಖಿತ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು, ಅದರ ಮುಂದುವರೆದ ಭಾಗವಾಗಿ ದಾಖಲೆಯನ್ನು ಹಾಜರು ಪಡಿಸಿದ್ದು, ಆರ್ ಟಿ ಸಿ ಯನ್ನು ನಿಪಿ:1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಎಮ್ ಎಮ್ ಜಿ ವಕೀಲರಿಂದ 1 ನೇ ಪ್ರತಿವಾದಿ ಪರ ವಕೀಲರು:**

1. ದಾವಾ ಆಸ್ತಿ ನಂಬರ 999 ಆಗಿರುತ್ತದೆ. ದಾವಾ ಆಸ್ತಿಗೆ ವಿಪಿಸಿ ನಂಬರ ಇದ್ದು, ಅದರ ನಂಬರ 16/1 ಇರುತ್ತದೆ. ವಿಪಿಸಿ ನಂ:16/1 ಆಸ್ತಿಗೆ ಹೊಂದಿಕೊಂಡು ವಿಪಿಸಿ ನಂ:16/2

ಇದೆ. ವಿಪಿಸಿ ನಂ:16/2 ಆಸ್ತಿ ನಮ್ಮ ಐದು ಜನ ಅಣ್ಣತಮ್ಮಂದಿರಿಗೆ ಸೇರಿದ್ದು ಇರುತ್ತದೆ. ದಾವಾ ಆಸ್ತಿ ನಂ:999 ಅದರ ವಿಪಿಸಿ ನಂ:16/1 ಆಗಿದ್ದು ಅದು ನಾವು ಐದು ಜನ ಅಣ್ಣತಮ್ಮಂದಿರಿಗೆ ಸಂಬಂದಪಟ್ಟಿದ್ದು ಇರುತ್ತದೆ. ನಮ್ಮ ಐದು ಜನ ಅಣ್ಣತಮ್ಮಂದಿರ ಹೆಸರು ವಲೀಪಾಶಾ, ದಾದಾಪೀರ, ತಾಜಪೀರ, ನಾನು ಮಹೆಬೂಬುಪೀರಾ ಹಾಗೂ ಮಕ್ತುಮಹುಸೇನ ಆಗಿರುತ್ತೇವೆ.

2. ನನ್ನ ಹಿರಿಯ ಅಣ್ಣ ವಲೀಪಾಶಾ ತೀರಿಕೊಂಡಿದ್ದಾರೆ. ವಲೀಪಾಶಾಗೆ ಆರು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ದಾದಾಪೀರ ಸಹ ತೀರಿಕೊಂಡಿದ್ದು, ಅವರ ಹೆಂಡತಿ ತೀರಿಕೊಂಡಿದ್ದು ಅವರ ಮಕ್ಕಳು ಇರುವುದಿಲ್ಲ. ಅವರ ಹೆಂಡತಿ ಹೆಸರು ಅಮ್ಮಾಜಾನ. ದಾದಾಪೀರನ ಹೆಂಡತಿ ಅಮ್ಮಾಜಾನ ಇವರು ಮುಧೋಳದಲ್ಲಿ ತನ್ನ ತವರು ಮನೆಯಲ್ಲಿ ವಾಸವಾಗಿದ್ದಾಳೆ ಎಂದರೆ ಸರಿ. ಮಕ್ತುಮಹುಸೇನ ಸಹ ತೀರಿಕೊಂಡಿದ್ದು, ಅವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇರುತ್ತಾನೆ. ಮಕ್ತುಮಹುಸೇನ ಇವರ ಮಗಳು ಕರೀಷ್ಮಾ ಎನ್ನುವಳು ತೀರಿಕೊಂಡಿರುತ್ತಾಳೆ.

3. ನಮ್ಮ ತಂದೆಯ ಹೆಸರು ಮೋದಿನಸಾಬ. ನಮ್ಮ ಕುಟುಂಬದಲ್ಲಿ ಹಿಸ್ಸೆ ದಿಸ್ಸೆ ಆಗಿರುವುದಿಲ್ಲ. ನನ್ನ ತಮ್ಮ 2 ನೇ ಪ್ರತಿವಾದಿ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂದಪಟ್ಟ ಹಾಗೇ ವಿಭಾಗ ಕೋರಿ ಇದೇ ನ್ಯಾಯಾಲಯದಲ್ಲಿ ಓ ಎಸ್ ನಂ:34/2002 ರಂತೆ ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ದಾವೆ ಮುಕ್ತಾಯಗೊಂಡಿದ್ದು, ಆ ದಾವೆಯಲ್ಲಿ ಆದ ಆದೇಶವನ್ನು ಪೀರಪಾಶಾ ಇವರು ಪ್ರಶ್ನಿಸಿ ಮೇಲ್ಮನವಿ ದಾಖಲಿಸಿದ್ದು, ಮೇಲ್ಮನವಿ ಚಾಲ್ತಿಯಲ್ಲಿರುತ್ತದೆ. ಸದರಿ ಮೇಲ್ಮನವಿಯನ್ನು ಯಾವ ಇಸ್ವಿಯಲ್ಲಿ ದಾಖಲಿಸಿದ್ದು ಎಂದು ನನಗೆ ನೆನೆಪು ಇರುವುದಿಲ್ಲ. ಓ ಎಸ್ ನಂ:34/2002 ದಿ:22.03.2010 ರಲ್ಲಿ ಹಿಸ್ಸೆ ದಿಸ್ಸೆ ಆಗಿ ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ಆಗಿತ್ತು, ಆದರೆ ಅದನ್ನು ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಆದ ಪ್ರಿಲ್ಮನರಿ ಡಿಕ್ರಿ ವಿರುದ್ಧ ನಾನೇ ಮೇಲ್ಮನವಿಯನ್ನು ಮಾನ್ಯ ಹಿರಿಯ ಶ್ರೇಣಿ ದಿವಾಣಿ ನ್ಯಾಯಲಯ ಕುಂದಗೋಳ ಇವರಲ್ಲಿ ಆರ್ ಎ ನಂ:54/2016 ರಂತೆ ದಾಖಲಿಸಿದ್ದೆ ಎಂದರೆ ಸಾಕ್ಷಿ ಅದು ನನ್ನ ಮಗ ಪೀರಪಾಶಾ ದಾಖಲಿಸಿದ್ದ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿಯನ್ನು ನಾನೇ ದಾಖಲಿಸಿದ್ದು ಹಾಗೂ ಅದು ದಿ:23.09.2017 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

4. ಸದರಿ ಓ ಎಸ್ ನಂ:34/2002 ಹಾಗೂ ಆರ್ ಎ ನಂ:54/2016 ದಾವಾ ಆಸ್ತಿ ಸಹ ಒಂದು ಆಸ್ತಿಯಾಗಿತ್ತು ಎಂದರೆ ಸಾಕ್ಷಿ ಅದು ಎಲ್ಲರಿಗೂ ಸಂಬಂದಿಸಿದ್ದು ಎಂದು

ನುಡಿಯುತ್ತಾರೆ. ನಾನು ಓ ಎಸ್ ನಂ:34/2002 ನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದ್ದು ಹೇಳಿದ್ದು, ಸದರಿ ಮೇಲ್ಮನವಿ ಇತ್ಯರ್ಥದ ಹಂತದಲ್ಲಿ ಇಂದಿಗೂ ಇರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ, ಅದು ಈಗ ಮುಕ್ತಾಯ ಹಂತದಲ್ಲಿ ಇದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ಪ್ರಸ್ತುತ ಯಾವ ಹಂತದಲ್ಲಿ ಇದೆ ಅಂತ ಹೇಳಿ ಈ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸುತ್ತೇನೆ.

(ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**